RAVIPRAKASH TIPPANNA AVIN
Digitally signed by RAVIPRAKASH TIPPANNA AVIN
Date: 2026.04.04 15:32:54 +0530

# 3 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ

## ಸಿ.ಸಿ. ಸಂಖ್ಯೆಃ 372/2012

## ದಿನಾಂಕಃ 28 ನೇ ಮಾರ್ಚ್ 2026

ಉಪಸ್ಥಿತರುಃ ಶ್ರೀ ರವಿಪ್ರಕಾಶ್ ಟಿ ಆವಿನ್, ಬಿ.ಬಿ.ಎ., ಎಲ್.ಎಲ್.ಎಮ್,
3 ನೇ ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಕನಕಪುರ.

**ಫಿರ್ಯಾದುದಾರರು : ಸಾತನೂರು ಪೊಲೀಸ್ ಠಾಣೆ**

**(ಸರ್ಕಾರಿ ಸಹಾಯಕ ಅಭಿಯೋಜಕರವರಿಂದ)**

**ವಿರುದ್ಧ**

**ಆರೋಪಿತರು** : 1. ಸಿ. ಮಲ್ಲೇಶ
ಬಿನ್ ಚಿಕ್ಕದುಂಡಯ್ಯ,
(ಮೃತಪಟ್ಟಿದ್ದಾರೆ)

2. ಶಶಿಕಲಾ
ಕೋಂ ಮಲ್ಲೇಶ
ವಯಸ್ಸು 38 ವರ್ಷಗಳು,

ಇಬ್ಬರ ವಾಸಃ
ಜೈ ಬೀಮ ನಗರ,
ಸಾತನೂರು ಟೌನ್,
ಸಾತನೂರು ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

**(ಶ್ರೀ ಎಸ್.ಡಿ ., ವಕೀಲರವರಿಂದ )**

| | | |
|---|---|---|
| 1 | ಘಟನೆ ನಡೆದ ದಿನಾಂಕ | : 12.03.2012 |
| 2 | ಘಟನೆ ವರದಿ ಮಾಡಿದ ದಿನಾಂಕ | : 20.03.2012 |
| 3 | ಪಿರ್ಯಾದುದಾರರ ಹೆಸರು | : ಬಸಮ್ಮ |
| 4 | ವಿಚಾರಣೆ ಪ್ರಾರಂಭವಾದ ದಿನಾಂಕ | : 13.03.2026 |
| 5 | ವಿಚಾರಣೆ ಮುಕ್ತಾಯವಾದ ದಿನಾಂಕ | : 13.03.2026 |
| 6 | ಆರೋಪಿಸಲ್ಪಟ್ಟ ಅಪರಾಧಗಳು | : ಭಾರತೀಯ ದಂಡ ಸಂಹಿತೆಯ ಕಲಂ 323, 324, 504, 506 ರೆ/ವಿ 34 |
| 7 | ತೀರ್ಪು ಉದ್ಘೋಷಣೆ ಮಾಡಿದ ದಿನಾಂಕ | : 28.03.2026 |
| 8 | ನ್ಯಾಯಾಧೀಶರ ಅಭಿಪ್ರಾಯ | : ಆರೋಪಿತರನ್ನು ಅಪರಾಧಗಳಿಂದ ದೋಷ ಮುಕ್ತಗೊಳಿಸಿದೆ. |

**:ತೀರ್ಪು::**

ಪೊಲೀಸ್ ಸಬ್ ಇನ್ಸ್ ಪೆಕ್ಟರ್, ಸಾತನೂರು ಪೊಲೀಸ್ ಠಾಣೆ, ಕನಕಪುರ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 323, 324, 504, 506 ರೆ/ವಿ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ :**

ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ಸಾತನೂರು ಪೊಲೀಸ್ ಠಾಣಾ ಸರಹದ್ದು, ಸಾತನೂರು ಅಂಬೇಡ್ಕರ್ ಕಾಲೋನಿಯ ಪಿರ್ಯಾದಿಯ ಮನೆ ಬಳಿ ಮತ್ತು ಆರೋಪಿಗಳು ಇಬ್ಬರ ಮನೆಯ ಮದ್ಯದ ಜಾಗದ ಓಡಾಡುವ ವಿಚಾರದಲ್ಲಿ ಚಾಸಾ-1/ಬಸಮ್ಮ ರವರಿಗೆ 1 ನೇ ಆರೋಪಿಯು

ಲೇ ಬಡ್ಡಿ, ಸೂಳೆ ಖಾಲಿ ಜಾಗದಲ್ಲಿ ಓಡಾಡಿದರೇ ನಿನ್ನ ಗಂಟು ಏನು ಹೋಗುತ್ತದೆ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ, ಚಾಸಾ-1/ಬಸಮ್ಮ ರವರು 1 ನೇ ಆರೋಪಿಗೆ ಅಲ್ಲಿ ಏಡಾಡಬೇಡ ಹಾಗೂ ಬಾಯಿಗೆ ಬಂದಂತೆ ಬೈಯ ಬೇಡ ಎಂದು ಹೇಳಿದಾಗ, 1 ಆರೋಪಿಯು ಅಲ್ಲೆ ಇದ್ದ ಒಂದು ದೊಣ್ಣೆಯನ್ನು ತೆಗೆದುಕೊಂಡು ಚಾಸಾ-1/ಬಸಮ್ಮ ರವರ ತಲೆಗೆ ಹೊಡೆದು ರಕ್ತಗಾಯ ಮಾಡಿದ್ದು, 2 ನೇ ಆರೋಪಿಯು ಬಾಯಿಗೆ ಬಾಯಿಗೆ ಬಂದಂತೆ ಬೈದು, ಕೈಯಿಂದ ಚಾಸಾ-1/ಬಸಮ್ಮ ರವರಿಗೆ ಹೊಡೆದು ನೋವುಂಟು ಮಾಡಿದ್ದು, 1 ಮತ್ತು 2 ನೇ ಆರೋಪಿಗಳು ಸಮಾನ ಉದ್ದೇಶದಿಂದ ನಿಮ್ಮ ಮನೆಯಲ್ಲಿ ಯಾರು ಇರುವುದಿಲ್ಲ ಕೊಲೆ ಮಾಡಿದರೂ ಕೇಳುವವರು ಯಾರು ಇಲ್ಲವೆಂದು ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆಂದು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 323, 324, 504, 506 ರೆ/ವಿ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**3.** ಆರೋಪಿತರು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದು, ಅವರಿಗೆ ದಂಡ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ಅಭಿಯೋಜನೆಯ ಪರ ದಾಖಲೆಗಳನ್ನು ಒದಗಿಸಲಾಗಿರುತ್ತದೆ.

**4.** ಭಾರತೀಯ ದಂಡ ಸಂಹಿತೆಯ ಕಲಂ 323, 324, 504, 506 ರೆ/ವಿ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ. ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ, ಆರೋಪಿತರಿಗೆ ಓದಿ ಹೇಳಿದ್ದು ಅವರು ಅದನ್ನು ಅಲ್ಲಗಳೆದಿದ್ದರಿಂದ ವಿಚಾರಣೆಗೆ ಮುಂದೂಡಲಾಯಿತು.

**5.**ಈ ಪ್ರಕರಣವು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಕನಕಪುರ ಪ್ರಕರಣ ಸಂಖ್ಯೆ ಕ್ರಿಮಿನಲ್ ಅಪೀಲ್ ನಂ.5003/2022 ರಲ್ಲಿ ಮಾಡಿದ ಆದೇಶದ ಅನ್ವಯ ರಿಮಾಂಡ್ ಆಗಿ ಬಂದಿದ್ದು ಮತ್ತು ಕ್ರಿಮಿನಲ್ ಅಪೀಲ್ ನಲ್ಲಿ 1ನೇ ಆರೋಪಿ ಮೃತಪಟ್ಟಿರುವುದಾಗಿ ನಮೂದು ಮಾಡಲಾಗಿರುತ್ತದೆ. ಆ ಕಾರಣ ದಿನಾಂಕಃ 18.11.2025 ರಂದು ಆದ ಆದೇಶದ ಪ್ರಕಾರ 1ನೇ ಆರೋಪಿಯ ವಿರುದ್ಧದ ಪ್ರಕರಣ ಅಬೇಟೆಡ್ ಆಗಿರುತ್ತದೆ.

**6.** ಅಭಿಯೋಜನೆಯು ದೋಷಾರೋಪಣೆ ಪಟ್ಟಿಯ 7 ಸಾಕ್ಷಿದಾರರಲ್ಲಿ, ಇಬ್ಬರು ಸಾಕ್ಷಿದಾರರನ್ನು ಮಾತ್ರ ಪ್ರಾ.ಸಾ-1 ಮತ್ತು 2 ಎಂಬುದಾಗಿ ವಿಚಾರಣೆಗೊಳಪಡಿಸಿರುತ್ತದೆ. ವಿಚಾರಣೆ ಮಾಡಿ 3 ದಾಖಲೆಗಳನ್ನು ನಿಶಾನೆ.ಪಿ-1 ರಿಂದ 3 ನಿಶಾನೆ.ಪಿ-3 ಎಂದು ಗುರುತಿಸಲಾಗಿದೆ.

**7.** ಅಭಿಯೋಜನೆಯ ಪಕ್ಷದ ಪ್ರಕರಣಕ್ಕೆ ಪೂರಕವಾಗಿ ಪ್ರಾ.ಸಾ-1 ಮತ್ತು 2 ರವರು ನುಡಿಯದೇ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವು ದೊರೆಯದಿದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ದಾಖಲಿಸುವ ಹೇಳಿಕೆಯನ್ನು ವಿನಾಯಿತಿ ನೀಡಲಾಯಿತು.

**8.** ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

**9.** ಅಭಿಯೋಜಕರು ಹಾಜರು ಪಡಿಸಿದ ಸಾಕ್ಷ್ಯಗಳ ಹೇಳಿಕೆಗಳನ್ನು, ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲಾತಿಗಳನ್ನು ಮತ್ತು ಉಭಯ ವಕೀಲರು ಮಂಡಿಸಿದ ವಾದ ವಿವಾದದ ಮೇರೆಗೆ ಪರಿಗಣನೆಗೆ ಉದ್ಭವಿಸುವ ಅಂಶಗಳು ಯಾವುವೆಂದರೆ;

**ಅಂಶ 1.** ಸಾತನೂರು ಪೊಲೀಸ್ ಠಾಣಾ ಸರಹದ್ದು, ಸಾತನೂರು ಅಂಬೇಡ್ಕರ್ ಕಾಲೋನಿಯ ಪಿರ್ಯಾದಿಯ

ಮನೆ ಬಳಿ ಮತ್ತು ಆರೋಪಿಗಳು ಇಬ್ಬರ ಮನೆಯ ಮದ್ಯದ ಜಾಗದ ಓಡಾಡುವ ವಿಚಾರದಲ್ಲಿ ಚಾಸಾ-1/ಬಸಮ್ಮ ರವರಿಗೆ ಆರೋಪಿಗಳು ಲೇ ಬಡ್ಡಿ, ಸೂಳೆ ಖಾಲಿ ಜಾಗದಲ್ಲಿ ಓಡಾಡಿದರೇ ನಿನ್ನ ಗಂಟು ಏನು ಹೋಗುತ್ತದೆ ಎಂದು ಹೇಳಿ ಅವಾಚ್ಯ ಶಬಧಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 504 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 2.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1/ಬಸಮ್ಮ ರವರು 1 ನೇ ಆರೋಪಿಗೆ ಅಲ್ಲಿ ಒಡಾಡಬೇಡಿ ಹಾಗೂ ಬಾಯಿಗೆ ಬಂದಂತೆ ಬೈಯ ಬೇಡ ಎಂದು ಹೇಳಿದಾಗ, 1 ಆರೋಪಿಯು ಅಲ್ಲೆ ಇದ್ದ ಒಂದು ದೊಣ್ಣೆಯನ್ನು ತೆಗೆದುಕೊಂಡು ಚಾಸಾ-1/ಬಸಮ್ಮ ರವರ ತಲೆಗೆ ಹೊಡೆದು ರಕ್ತಗಾಯ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 324 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 3.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು

ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ *2*ನೇ ಆರೋಪಿಯು ಬಾಯಿಗೆ ಬಂದಂತೆ ಬೈದು, ಕೈಯಿಂದ ಚಾಸಾ-*1/*ಬಸಮ್ಮ ರವರಿಗೆ ಹೊಡೆದು ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 323 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 4.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-*1/*ಬಸಮ್ಮ ರವರಿಗೆ ನಿಮ್ಮ ಮನೆಯಲ್ಲಿ ಯಾರು ಇರುವುದಿಲ್ಲ ಕೊಲೆ ಮಾಡಿದರೂ ಕೇಳುವವರು ಯಾರು ಇಲ್ಲವೆಂದು ಪ್ರಾಣ ಬೆದರಿಕೆಯನ್ನು ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 506 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 5.** ಯಾವ ಆದೇಶ ?

**10.** ಈ ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಗಿನಂತಿದೆಃ

**ಅಂಶ-1 : ನಕಾರಾತ್ಮಕವಾಗಿ**

**ಅಂಶ-2 : ನಕಾರಾತ್ಮಕವಾಗಿ**

**ಅಂಶ-3 : ನಕಾರಾತ್ಮಕವಾಗಿ**

**ಅಂಶ-4 : ನಕಾರಾತ್ಮಕವಾಗಿ**

**ಅಂಶ-5 : ಅಂತಿಮ ಆದೇಶ**

## ಕಾರಣಗಳು

**11. ಅಂಶ-1 ರಿಂದ 4 :** ಸಂಗತಿಯ ಪುನರಾವರ್ತನೆಯನ್ನು ತಪ್ಪಿಸಲು ಹಾಗೂ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

**12.** ಅಭಿಯೋಜನೆಯು ಪ್ರಕರಣವನ್ನು ರುಜುವಾತು ಪಡಿಸಲು ತನ್ನ ಪರವಾಗಿ ಇಬ್ಬರು ಸಾಕ್ಷಿದಾರರನ್ನು ಪ್ರಾ.ಸಾ-1 ಮತ್ತು 2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ.

**13.** ಪ್ರಾ.ಸಾ-1 ವರಲಕ್ಷ್ಮಿ ಪಿರ್ಯಾದಿ ಚಾಸಾ-1 ರವರ ಮಗಳಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ತಾಯಿ ಚಾಸಾ-1 ಮತ್ತು ತನ್ನ ತಂದೆ ಚಾಸಾ-2 ರವರು ತೀರಿಕೊಂಡಿದ್ದಾರೆ ಎಂದು ಹೇಳಿ ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಮತ್ತು ನಿಪಿ-1 ದೂರಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ

ಸದರಿ ಸಾಕ್ಷಿದಾರರು ತಮ್ಮ ನಿಪಿ-2 ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**14.** ಪ್ರಾ.ಸಾ-2 ಮುತ್ತುರಾಜು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನ್ನ ತಾಯಿ ಚಾಸಾ-1 ಮತ್ತು ತನ್ನ ತಂದೆ ಚಾಸಾ-2 ರವರು ತೀರಿಕೊಂಡಿದ್ದಾರೆ ಎಂದು ಹೇಳಿ ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ನಿಪಿ-3 ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**15.** ಈ ಸಾಕ್ಷಿದಾರರ ವಿಚಾರಣೆ ಆದ ನಂತರ ಮಾನ್ಯ ಸರ್ಕಾರಿ ಅಭಿಯೋಜಕರು ದೋಷಾರೋಪಣೆ ಪಟ್ಟಿಯಲ್ಲಿ ಹೆಸರಿಸಲಾದ ಉಳಿದ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸಲು ಕೋರಿಕೊಂಡಿರುತ್ತಾರೆ. ಆದರೆ ಈ ಪ್ರಕರಣದ ಫಿರ್ಯಾದಿ ಮತ್ತು ಗಾಯಾಳುವಿನ ವಾರಸುದಾರರಾದ ಪ್ರಾಸಾ-1 ಪ್ರತ್ಯಕ್ಷ ಸಾಕ್ಷಿ ಹಾಗೂ ಪ್ರಾಸಾ-2 ಮಹಜರ ಸಾಕ್ಷಿ ಆರೋಪಿತಳ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೆ ಇದ್ದುದರಿಂದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡಿದರೂ ಸಹ ಅಭಿಯೋಜನೆಗೆ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ತೀರ್ಮಾನಿಸಿ ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಅಭಿಯೋಜನೆಯ ಪರ ಸಾಕ್ಷ್ಯವನ್ನು ಮುಕ್ತಾಯಗೊಳಿಸಿತು.

**16.** ಈ ಪ್ರಕರಣದಲ್ಲಿ ಪ್ರಮುಖವೆಂದು ಹೇಳಲಾದ ವ್ಯಕ್ತಿಗಳು ಆರೋಪಿತಳ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲವಾದ್ದರಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ ಯಾವುದೇ ಹುರುಳು ಇಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆರೋಪಿತಳ ವಿರುದ್ಧ ಹೊರಿಸಲಾದ ಆರೋಪಗಳು ಕೇವಲ ಆರೋಪಗಳಾಗಿಯೇ ಉಳಿಯುತ್ತವೇ ವಿನಃ ಯಾವುದೇ ಸಾಕ್ಷ್ಯಾಧಾರಗಳಿಂದ ರುಜುವಾತು ಆಗಿರುವುದಿಲ್ಲ.

**17.** ಆದ್ದರಿಂದ ಅಭಿಯೋಜನೆಯು ಆರೋಪಿತಳ ವಿರುದ್ಧ ಆರೋಪಿಸಲಾದಂತಹ ಭಾರತೀಯ ದಂಡ ಸಂಹಿತೆಯ ಕಲಂ 323, 324, 504, 506 ರೆ/ವಿ 34 ರ ಅಪರಾಧವನ್ನು ಆರೋಪಿತಳು ಮಾಡಿರುತ್ತಾರೆಂದು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ ಹಾಗೂ ಅಭಿಯೋಜನೆಯು ಆರೋಪಿತಳ ಮೇಲಿನ ಅಪರಾಧವನ್ನು ಎಲ್ಲಾ ಸಂಶಯಾತೀತ ಕಾರಣಗಳಿಂದ ಹೊರತುಪಡಿಸಿ ರುಜುವಾತು ಪಡಿಸಬೇಕೆಂಬುದು ಕ್ರಿಮಿನಲ್ ನ್ಯಾಯಶಾಸ್ತ್ರದ ಸಾಮಾನ್ಯ ನಿಯಮವಾಗಿದ್ದು, ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುವುದರಿಂದ ಮತ್ತು ಸಂಶಯದ ಲಾಭವನ್ನು ಆರೋಪಿತಳಿಗೆ ಕೊಡಬೇಕಾಗಿರುವುದು ಸಾಮಾನ್ಯ ಕಾನೂನಿನ ತತ್ವವಾಗಿರುವುದರಿಂದ ಈ ಮೇಲಿನ **ಅಂಶ-1 ರಿಂದ 4 ಗಳನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**18. ಅಂಶ-5:** ಅಂಶ-1 ರಿಂದ 4 ರಲ್ಲಿ ಹೇಳಲಾದ ಕಾರಣಗಳಿಂದಾಗಿ, ಆರೋಪಿತಳ ವಿರುದ್ಧ ಹೊರಿಸಲಾದ ಆರೋಪಗಳನ್ನು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಲು ವಿಫಲರಾಗಿರುವ ಕಾರಣ ಆರೋಪಿಗೆ

ಬಿಡುಗಡೆಗೆ ಅರ್ಹರಿರುತ್ತಾರೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯ ಮಾಡುತ್ತದೆ .

**:ಆದೇಶ:**

ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ 2 ನೇ ಆರೋಪಿತಳನ್ನು ಭಾರತೀಯ ದಂಡ ಸಂಹಿತೆಯ ಕಲಂ 323, 324, 504, 506 ರೆ/ವಿ 34 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

2 ನೇ ಆರೋಪಿತಳ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.

2 ನೇ ಆರೋಪಿತಳ ಮತ್ತು ಅವರ ಪರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437-A ನೀಡಿದ್ದ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರವು ಇದಿನಿಂದ 6 ತಿಂಗಳುಗಳ ಕಾಲ ಜಾರಿಯಲ್ಲಿರುತ್ತದೆ.

ಅಪೀಲು ಅವಧಿ ಮುಗಿದ ನಂತರ ಪಿಎಫ್ ನಂ.38/2012 ದಿನಾಂಕ.14.03.2012 ರಡಿಯಲ್ಲಿ ಕ್ರಮ ಸಂಖ್ಯೆ ಸಂಖ್ಯೆ-1 ರಡಿಯಲ್ಲಿ ಅಮಾನತ್ತು ಪಡಿಸಿಕೊಂಡಿರುವ ಸುಮಾರು 2 1/2 ಅಡಿ ಉದ್ದದ

ಕಾಡು ಜಾತಿಯ ದೊಣ್ಣೆ ಇದು ಬೆಲೆ ಬಾಳದ ವಸ್ತುವಾದ್ದರಿಂದ, ಇದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಿದೆ.

*(ಶೀಘ್ರಲಿಪಿಗಾರರು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ **28 ನೇ ಮಾರ್ಚ್ 2026** ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

RAVIPRAKASH TIPPANNA AVIN
Digitally signed by RAVIPRAKASH TIPPANNA AVIN
Date: 2026.04.04 15:33:06 +0530

**(ರವಿಪ್ರಕಾಶ್ ಟಿ ಆವಿನ್)**
**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ.,ಕನಕಪುರ .**

**::ಅನುಬಂಧ::**

**1. <u>ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:</u>**

ಪ್ರಾಸಾ-1 : ವರಲಕ್ಷ್ಮಿ
ಪ್ರಾಸಾ-2 : ಮುತ್ತುರಾಜು

**2. <u>ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳು:</u>**

ನಿಶಾನೆ ಪಿ-1 : ದೂರು
ನಿಶಾನೆ ಪಿ-1(ಎ) : ಪ್ರಾಸಾ-1 ರವರ ಸಹಿ
ನಿಶಾನೆ ಪಿ-2 : ಪ್ರಾಸಾ-1 ರವರ ಹೇಳಿಕೆ
ನಿಶಾನೆ ಪಿ-3 : ಪ್ರಾಸಾ-2 ರವರ ಹೇಳಿಕೆ

**3. ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:**

**ಇಲ್ಲಾ**

**4. ಆರೋಪಿ ಪರ ಹಾಜರು ಪಡಿಸಿದ ದಾಖಲೆಗಳು:**

**ಇಲ್ಲಾ**

**5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೆಮಾಲುಗಳು:**

**ಇಲ್ಲಾ**

**(ರವಿಪ್ರಕಾಶ್ ಟಿ ಆವಿನ್)**
**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ.,ಕನಕಪುರ .**